SC No. 138/2023
PW.-4

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 138/2023**

| | | |
|---|---|---|
| ಸಾಕ್ಷಿದಾರರ ಹೆಸರು | ಮಹದೇವಮ್ಮ | ಪ್ರಮಾಣ ವಚನ ಮಾಡಿದ ದಿನಾಂಕ: **24.09.2025** |
| ತಂದೆಯ/ಗಂಡನ ಹೆಸರು | ಮಹದೇವಪ್ಪ | |
| ವಯಸ್ಸು | 48 ವರ್ಷ | |
| ವೃತ್ತಿ | ವ್ಯವಸಾಯ | ಪ್ರಾ.ಸಾಃ 4 |
| ವಾಸ ಸ್ಥಳ | ಮೇದಿನಿ ಗ್ರಾಮ | ಚಾ.ಸಾಃ 5 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನನಗೆ ಒಟ್ಟು 3 ಜನ ಹೆಣ್ಣು ಮಕ್ಕಳು ಅವರುಗಳೆಂದರೆ ಅಭಿಲಾಶ, ಚೈತ್ರ ಮತ್ತು ರಂಜಿತ. ನನ್ನ 2 ನೇ ಮಗಳು ಚೈತ್ರ ಪಾಂಡವಪುರ ತಾಲ್ಲೂಕಿನ ಹಾನುವಾಳು ಗ್ರಾಮದ ಬಸವರಾಜ್ ರವರ ಮಗ ಮಹದೇವಸ್ವಾಮಿ ಎನ್ನುವವರೊಂದಿಗೆ ಮದುವೆ ಆಗಿತ್ತು. ಮದುವೆ ಆದ ಮೇಲೆ ನನ್ನ ಮಗಳು ಗಂಡನೊಂದಿಗೆ ಹಾನುವಾಳು ಗ್ರಾಮದಲ್ಲಿ ವಾಸವಾಗಿದ್ದಳು. ಅವರಿಬ್ಬರ ದಾಂಪತ್ಯ ಜೀವನದಿಂದ ಸಿದ್ದಾರ್ಥ ಎನ್ನುವ ಒಬ್ಬ ಮಗ ಜನಿಸಿರುತ್ತಾನೆ.

ಈಗ್ಗೆ 2 ವರ್ಷಗಳ ಹಿಂದೆ ನನ್ನ ಮಗಳು ತೀರಿಕೊಂಡಿರುತ್ತಾಳೆ. ಆದರೆ ಯಾವ ಕಾರಣಕ್ಕಾಗಿ ಮರಣ ಹೊಂದಿದ್ದಳು ಎಂದು ಗೊತ್ತಿಲ್ಲ. ನನ್ನ ಮಗಳು ಹುಷಾರಿರುವುದಿಲ್ಲ

ಎಂದು ಹೇಳಿ ಸಾಯುವ ಒಂದು ತಿಂಗಳು ಪೂರ್ವದಲ್ಲಿ ನನ್ನ ಮನೆಗೆ ಬಂದಿದ್ದಳು. ಆಕೆಗೆ ಹೊಟ್ಟೆ ನೋವು ಎಂದು ಹೇಳಿ ಬಂದಿದ್ದಳು. ವೈದ್ಯರಿಗೆ ತೋರಿಸಿದ್ದೆ ಅದಕ್ಕೆ ವೈದ್ಯರು ಹೆಚ್ಚಿನ ಗ್ಯಾಸ್ ಆಗಿ ಆ ರೀತಿ ಹೊಟ್ಟೆ ನೋವು ಬಂದಿರುತ್ತದೆ ಎಂದು ಹೇಳಿದ್ದರು. ನನ್ನ ಮಗಳು ತಲಕಾಡಿನಲ್ಲಿ ಮೊಬೈಲ್ ರಿಪೇರಿ ಮಾಡಲು ಕೊಟ್ಟಿದ್ದಳು ಅದನ್ನು ಪಡೆದುಕೊಂಡು ಬರುತ್ತೇನೆ ಎಂದು ಹೇಳಿ ತಲಕಾಡಿಗೆ ಹೋಗಿದ್ದಳು ಆ ನಂತರ ವಾಪಸ್ಸು ಬರಲಿಲ್ಲ. ರಾತ್ರಿ 6.30-7.00 ಗಂಟೆ ಸುಮಾರಿಗೆ ಮೈಸೂರಿನ ಕೆ.ಆರ್. ಆಸ್ಪತ್ರೆಯಿಂದ ಫೋನ್ ಬಂದಿತ್ತು. ನನ್ನ ಮಗಳಿಗೆ ಪ್ರಜ್ಞೆ ತಪ್ಪಿ ಹೋಗಿರುತ್ತದೆ ಎಂದು ತಿಳಿಸಿದ್ದರು. ಮಾರನೇ ದಿವಸ ನಾನು ಮತ್ತು ನನ್ನ ಅಣ್ಣ ಹಾಗೂ ನನ್ನ ಅಳಿಮಯ್ಯ ಕೆ.ಆರ್. ಆಸ್ಪತ್ರೆಗೆ ಬಂದಿದ್ದೆವು. ಆ ವೇಳೆಗಾಗಲೇ ನನ್ನ ಮಗಳು ಮರಣ ಹೊಂದಿದ್ದು ಶವ ಪರೀಕ್ಷೆಯನ್ನು ಮಾಡಿ ವಾರ್ಡ್ ಗೆ ಹಾಕಿದ್ದರು. ಮಗಳ ಶವವನ್ನು ಹಾನುವಾಳು ಗ್ರಾಮಕ್ಕೆ ತೆಗೆದುಕೊಂಡು ಹೋಗಿ ಶವ ಸಂಸ್ಕಾರವನ್ನು ಮಾಡಲಾಗಿತ್ತು. ನನ್ನ ಮಗಳು ಯಾವ ಕಾರಣಕ್ಕಾಗಿ ಮರಣ ಹೊಂದಿದಳು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮಗಳು ಮತ್ತು ಅಳಿಯ ಅನ್ಯೋನ್ಯವಾಗಿ ಇದ್ದರು. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ಈ ಹಿಂದೆ ಸರಿಯಾಗಿ ನೋಡಿರುವುದಿಲ್ಲ. ನನ್ನ ಮಗಳು ಮೊಬೈಲ್ ನಲ್ಲಿ ನನ್ನ ಸಾವಿಗೆ ನಂದ ನೇ ಕಾರಣ ಎಂದು ಹೇಳಿದ್ದಳು. ಪೊಲೀಸರು ನನ್ನನ್ನು ವಿಚಾರಣೆ ಮಾಡಿರಲಿಲ್ಲ. ನನ್ನ ಗಂಡ ಮರಣ ಹೊಂದಿ 4 ತಿಂಗಳು ಆಗಿರುತ್ತದೆ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನನ್ನ ಮಗಳು ಸಾಯುವ 2 ವರ್ಷ ಪೂರ್ವದಲ್ಲಿ ಪಾಂಡವಪುರ ವಾಸಿ ನಂದನ್ ಎಂಬ ಹುಡುಗನೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿರುವ ವಿಚಾರ ನನ್ನ ಅಳಿಯನಿಗೆ ಗೊತ್ತಾಗಿದ್ದರಿಂದ ನನ್ನನ್ನು, ನನ್ನ ಗಂಡನನ್ನು ಮತ್ತು ತಮ್ಮ ಶಿವಲಿಂಗಯ್ಯ ರವರನ್ನು ಕರೆಸಿ ತಿಳಿಸಿದ್ದ ಎಂದರೆ ಸರಿಯಲ್ಲ. ಆದರೆ ಸದರಿ ಪಂಚಾಯಿತಿಗೆ ನನ್ನ ತಂಗಿ ಮತ್ತು ಅಣ್ಣ ಹೋಗಿದ್ದರು. ಆ ಪಂಚಾಯಿತಿಯಲ್ಲಿ ಚೈತ್ರ ಳಿಗೆ ಇನ್ನುಮುಂದೆ ಮಾಡಬೇಡ ಎಂದು ಬುದ್ದಿ ವಾದ ಹೇಳಿ ಗಂಡನ ಮನೆಗೆ ಕಳುಹಿಸಿದ್ದರು ಎಂದರೆ ಸರಿ. ನಂದನ್ ನನ್ನ ಅಳಿಯ ಮಹದೇವಸ್ವಾಮಿಗೆ ಫೋನ್ ಮಾಡಿ ನಿನ್ನ ಹೆಂಡತಿ ಇಲ್ಲದೇ ನಾನು ಇರುವುದಿಲ್ಲ ಎಂದು ಫೋನ್ ಮಾಡಿ ತಿಳಿಸಿದ್ದರಿಂದ ನನ್ನ ಅಳಿಯ ಪಾಂಡವಪುರ ಕೋರ್ಟ್ ನಲ್ಲಿ ಡೈವರ್ಸ್ ಗೆ ಅರ್ಜಿ ಹಾಕಿದ್ದ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನನ್ನ ಮಗಳು ನನ್ನ ಮನೆಗೆ ಬಂದು ಜೀವನ ಮಾಡಲು ಪ್ರಾರಂಭ ಮಾಡಿದ್ದಳು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ನನ್ನ ಮಗಳಿಗೆ ನೀನು ಏಕೆ ಜೀವನವನ್ನು ಈ ರೀತಿ ಮಾಡಿಕೊಂಡೆ ಎಂದು ಕೇಳಿದ್ದೆವು ಎಂದರೆ ನನ್ನ ಗಂಡ ಕೇಳಿದ್ದರು ನಾನು ಕೇಳಿರುವುದಿಲ್ಲ. ನನ್ನ ಮಗಳು ಆರೋಪಿತನು ತನಗೆ ಇಷ್ಟ ಇಲ್ಲದೇ ಇದ್ದರೂ ಸಹ ಹಿಂಸೆ ಮಾಡುತ್ತಿದ್ದಾನೆ ಮತ್ತು ಗಂಡ ಮನೆಯಲ್ಲಿ ಇಲ್ಲದೇ ಇದ್ದಾಗ ಮನೆಗೆ ಬಂದು ಹೋಗುತ್ತಿದ್ದು ಇದೆಲ್ಲಾ ಬೇಡ ಇದರಿಂದ ತೊಂದರೆ

ಆಗುತ್ತದೆ ಎಂದು ಎಷ್ಟು ಕೇಳಿಕೊಂಡರೂ ಕೇಳದೇ ಮಗನನ್ನು ಮತ್ತು ಗಂಡನನ್ನು ಉಳಿಸುವುದಿಲ್ಲ ಎಂದು ಬೆದರಿಕೆ ಹಾಕಿ ಅವನಿಂದಲೇ ಸಂಸಾರ ಹಾಳಾಯಿತು ಎಂದು ಹೇಳಿದ್ದಳು ಎಂದರೆ ಸರಿ. ನನ್ನ ಮಗಳು ದಿನಾಂಕ 01.11.2020 ರಂದು ನಾನು ಮತ್ತು ನನ್ನ ಗಂಡ ಜಮೀನಿನ ಹತ್ತಿರ ದಿಂದ ವಾಪಸ್ಸು ಬಂದಾಗ ಮನೆಯಲ್ಲಿ ಇರಲಿಲ್ಲ ಮಕ್ಕಳನ್ನು ವಿಚಾರಿಸಿದಾಗ ಮಧ್ಯಾಹ್ನ 12.30 ಗಂಟೆಯಲ್ಲಿ ಬಸ್ ಹತ್ತಿ ಹೋಗಿದ್ದಾಗಿ ತಿಳಿಸಿದ್ದು ಎಲ್ಲಿಯೂ ಹೋಗಿರಬಹುದು ವಾಪಸ್ಸು ಬರುತ್ತಾಳೆ ಎಂದು ಸುಮ್ಮನಾಗಿದ್ದು ಸಂಜೆ 4.00 ಗಂಟೆ ಸಮಯದಲ್ಲಿ ಕೆ.ಆರ್. ಆಸ್ಪತ್ರೆಯ ವಾರ್ಡ್ ಬಾಯ್ ಎಂದು ಕೊಂಡು ಫೋನ್ ಮಾಡಿ ಮಗಳು ಸಬರ್ ಬಸ್ ನಿಲ್ದಾಣದ ಎದುರು ಇರುವ ಬಸ್ ಸ್ಟಾಂಡ್ ಹತ್ತಿರ ಯಾವುದೋ ಮಾತ್ರೆಗಳನ್ನು ಸೇವನೆ ಮಾಡಿದ್ದರಿಂದ ತುಂಬಾ ಸಿರಿಯಸ್ ಆಗಿದೆ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾಳೆ ಎಂದು ತಿಳಿಸಿದ್ದರು ಎಂದರೆ ಸರಿ. ಈ ವಿಷಯವನ್ನು ನನ್ನ ಮೊದಲ ಅಳಿಯ ವೇಣುಕುಮಾರ್ ರವರಿಗೆ ತಿಳಿಸಿದ್ದೆ ಎಂದರೆ ಸರಿ. ಸಂಜೆ 6.30 ಗಂಟೆಯಲ್ಲಿ ವೇಣುಕುಮಾರ್ ಫೋನ್ ಮಾಡಿ ಚೈತ್ರಳು ಹೆಚ್ಚಿನ ಚಿಕಿತ್ಸೆಗಾಗಿ DRM ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾಳೆ ಎಂದು ತಿಳಿಸಿದ್ದರು ಎಂದರೆ ಸರಿ. ನನ್ನ ಮಗಳು ಮಾತ್ರೆಗಳನ್ನು ಸೇವನೆ ಮಾಡುವ ಮುಂದೆ ತನ್ನ ಗಂಡ ಮಹದೇವಸ್ವಾಮಿಗೆ ಫೋನ್ ಮಾಡಿ ತಾನು ಸಬರ್ ಬಸ್ ನಿಲ್ದಾಣದ ಎದುರು ಇರುವ ಕುದುರೆ ಸ್ಟಾಂಡ್ ಬಳಿ ಇದ್ದೇನೆ ನಾನು ಬದುಕುವುದಿಲ್ಲ ನಂದನ್ ಅನ್ನು ಸುಮ್ಮನೆ ಬಿಡಬೇಡಿ ಎಂದು ಫೋನ್ ಮಾಡಿ ತಿಳಿಸಿರುತ್ತಾಳೆ ಎಂದು ವೇಣು ಕುವಾರ್ ನಿಂದ ನನಗೆ ಗೊತ್ತಾಗಿತ್ತು ಎಂದರೆ ಸರಿ. ನಂತರ ನನ್ನ ಮೊಬೈಲ್ ಸ್ವಿಚ್ ಆಫ್ ಆಗಿದ್ದರಿಂದ ದಿನಾಂಕ 02.11.2021 ರಂದು ಬೆಳಗ್ಗೆ 9.00 ಗಂಟೆಯಲ್ಲಿ ಮೊಬೈಲ್ ಆನ್ ಮಾಡಿದಾಗ

ವೇಣುಕುವಾರ್ ನನಗೆ ಫೋನ್ ಮಾಡಿ ಚೈತ್ರಳು ನಿನ್ನೆ ದಿನ ರಾತ್ರಿ 9.15 ಗಂಟೆಯಲ್ಲಿ ತೀರಿಕೊಂಡಿರುತ್ತಾಳೆ ಎಂದು ವಿಚಾರವನ್ನು ತಿಳಿಸಿದ್ದರು ಮಗಳನ್ನು ನೋಡಲು ಹೋದಾಗ ಅಳಿಯ ವೇಣುಕುಮಾರ್ ನನ್ನ ಮಗಳ ಹತ್ತಿರ ಇದ್ದ ಎಂದರೆ ಸರಿ. ವೇಣು ಕುಮಾರ್ ರವರು ನಿನ್ನ ಮಗಳ ಹತ್ತಿರ ನೋಟ್ ಬುಕ್ ಇತ್ತು ಅವರ ಸಾವಿಗೆ ನಂದನ್ ಕಾರಣ ಎಂದು ಡೆತ್ ನೋಟ್ ಬರೆದಿರುತ್ತಾಳೆ ಎಂದು ಹೇಳಿ ನೋಟ್ ಬುಕ್ ಕೊಟ್ಟಾಗ ನನ್ನ ಗಂಡ ಆ ನೋಟ್ ಬುಕ್ ಪಡೆದುಕೊಂಡು ಓದಿ ಹೇಳಿದ್ದು ಅದರಲ್ಲಿ ನನ್ನ ಮಗಳು ಸಾಯುವ ಮುನ್ನ ನನ್ನ ಸಾವಿಗೆ ನಂದನ್ ಕಾರಣ ಅವನಿಂದ ಟಾರ್ಚರ್ ಆಗಿದೆ ನನ್ನ ಜೀವನ ನರಕ ಮಾಡಿದ್ದಾನೆ ಎಂದು ಬರೆದಿತ್ತು ಎಂದು ನನಗೆ ಗೊತ್ತಾಗಿತ್ತು ಎಂದರೆ ಸರಿ.

***( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶವನ್ನು ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)***

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.